# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ.114 ಅಗರಂ ವಾರ್ಡಿನ ದಿನಾಂಕ: 01-10-2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 01-10-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಗರಂ ವಾರ್ಡ್ ಸಂಖ್ಯೆ.114 ಸಭೆ BBMP Girls Junior College, Austintown, ORC Road, Bengaluru ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಮಾನ್ಯ ಶ್ರೀ. ಎನ್. ವೆಂಕಟೇಶ್, ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ.ಹಳ್ಳಿ) ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ.114 ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯು ದಿನಾಂಕ: 01-10-2022 ರಂದು ನಡೆಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

1. ಶ್ರೀ. ಎನ್. ವೆಂಕಟೇಶ್, ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ.ಹಳ್ಳಿ)
2. ಶ್ರೀ. ವಿನಯ್ ಕೆ.ಪಿ., ವಾರ್ಡ್ ಸಮಿತಿಯ ಕಾರ್ಯದರ್ಶಿ, ಸಹಾಯಕ ಅಭಿಯಂತರರು ಹಾಗೂ ಬಿ.ಬಿ.ಎಂ.ಪಿ ಇತರ ವಿಭಾಗಗಳ ಅಂದರೆ, ಆರೋಗ್ಯ, ಕಾಮಗಾರಿ, ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಹಾಜರಿದ್ದರು.
3. ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ. ರಾಧ, ಶ್ರೀಮತಿ. ಭವಾನಿ, ಶ್ರೀ. ನಂದ ಪಿ.ಕೆ, ಶ್ರೀಮತಿ. ವಸಂತ, ಶ್ರೀ. ಶರವಣ ಮತ್ತು ಶ್ರೀ. ರಾಜ್ ಕುಟ್ಟಿ ರವರು ಸಭೆಗೆ ಹಾಜರಿದ್ದರು.

ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಆಹ್ವಾನಿತರಾಗಿದ್ದ ಸ್ಥಳೀಯರು ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ವಾರ್ಡ್ ಸಮಿತಿ ಸಭೆಯಲ್ಲಿ ನೀಡಿರುವ ಈ ಕೆಳಕಂಡ ವಾರ್ಡಿನ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.**

1. ಶ್ರೀ. ವಸಂತ ರವರು ಮನವಿ ಸಲ್ಲಿಸಿ ಆಸ್ಟಿನ್‌ಟೌನ್ 1ನೇ ಸ್ಕ್ವೇರ್, 3ನೇ ಸ್ಕ್ವೇರ್, 4ನೇ ಸ್ಕ್ವೇರ್ ಮತ್ತು 5ನೇ ಸ್ಕ್ವೇರ್ ಹತ್ತಿರ ಹಳೆಯದಾಗಿರುವ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಲು ಕೋರಿರುತ್ತಾರೆ. ಈ ಬಗ್ಗೆ ಅರಣ್ಯಾಧಿಕಾರಿಗಳು, ಪೂರ್ವ ವಲಯ, ಬಿ.ಬಿ.ಎಂ.ಪಿ ರವರ ಗಮನಕ್ಕೆ ತರಲಾಗಿದೆ.
2. ಶ್ರೀ. ರಾಜ್‌ಕುಟ್ಟಿ ರವರು ಮನವಿ ಸಲ್ಲಿಸಿ ಬಿ.ಬಿ.ಎಂ.ಪಿ ಬಾಲಕಿಯರ ಕಾಲೇಜು ಒಳಗಿರುವ ಡೆಬ್ರಿಸ್ ಮತ್ತು ಮಾಯಾಬಜಾರ್ ಪಾದಚಾರಿ ಮಾರ್ಗದ ಮೇಲಿರುವ ಡೆಬ್ರಿಸ್ ಅನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪವಿಭಾಗ ರವರ ಗಮನಕ್ಕೆ ತರಲಾಗಿದೆ.
3. ಶ್ರೀ. ರಾಜ್‌ಕುಟ್ಟಿ ರವರು ಮನವಿ ಸಲ್ಲಿಸಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್.ಇ.ಡಿ ಕಂಬಗಳು ಹಾಗೂ ಬೀದಿ ದೀಪಗಳ ಕೊರತೆ ಇರುತ್ತದೆ. ಇದರ ಬಗ್ಗೆ ಕ್ರಮಕೈಗೊಳ್ಳಲು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪವಿಭಾಗ, ಬಿ.ಬಿ.ಎಂ.ಪಿ ರವರ ಗಮನಕ್ಕೆ ತರಲಾಗಿದೆ.

ಪು.ತಿ.ನೋ..

Scanned with OKEN Scanner

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿಗಳು
ವಾರ್ಡ್ ನಂ.114 ಅಗರಂ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

1. ಮಾನ್ಯ ವಿಶೇಷ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು (ಪೂರ್ವ), ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4. ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಪ್ರತಿ.

Scanned with OKEN Scanner

ವಾರ್ಡ್ ನಂ.114ರ ವಾರ್ಡ್ ಸಮಿತಿ ಸಭೆಯ ಛಾಯಾಚಿತ್ರಗಳು










